

ಹದ್ದು ಕಾಗೆ ಭೂತ ಪಿಶಾಚಿಗಳು ಆ ಹೆಣಗಳನ್ನು ತಿನ್ನಲು ಕಾದು ನಿಂತಿದ್ದವು.

ರುದ್ರನ ಆಟ ನಡೆದು ಮುಗಿದ ಹಾಗಿದ್ದ ಆ ಜಾಗಕ್ಕೆ ಬಂದೊಡನೆ ಪ್ರಾಣವೇ ಕಳಚಿಹೋದ ಹಾಗೆ ಪಲ್ಲಕ್ಕಿಗಳಿಂದ ಒಬ್ಬೊಬ್ಬರೂ ದೊಪದೊಪ್ಪನೆ ಬಿದ್ದರು. ದುಃಖದಿಂದ ಬಳಲಿದ್ದರು. ತಬ್ಬಲಿಗಳಾಗಿದ್ದರು. ಮೈಯಲ್ಲಿ ಜೀವವೇ ಇದ್ದಂತೆ ಕಾಣಲಿಲ್ಲ. ಯುದ್ಧ ಭೂಮಿಯಲ್ಲಿ ಎಲ್ಲೆಲ್ಲೂ ಈ ದುಃಖದ ಹೆಂಗಸರ ಗೋಳೇ ತುಂಬಿದಂತೆ ಅನಿಸಿತು ಗಾಂಧಾರಿಗೆ. ಪುರುಷೋತ್ತಮನಾದ ಪುಂಡರೀಕಾಕ್ಷವನ್ನು ಕರೆದು ಆ ರಣರಂಗವನ್ನು ತೋರಿಸುತ್ತಾ–

**ಗಾಂಧಾರಿ:** ನೋಡು ಕೃಷ್ಣಾ, ನೋಡು, ಗಂಡಂದಿರ ಕೊಲೆಯಾದ ನನ್ನ ಸೊಸೆಯರ ಗತಿ ನೋಡು ತಲೆ ಕೆದರಿ ಹೋಗಿದೆ, ತಮ್ಮ ಗಂಡಂದಿರ ಗುಣಗಳನ್ನು ನೆನೆಯುತ್ತಾ ಗಂಡ ಮಗ ಅಪ್ಪ ಸೋದರ ಎಂದು ನಿಂತು ನಿಂತು ಕೂಗುತ್ತಾ ಅಲೆದಾಡುತ್ತಿದ್ದಾರೆ.

ವೀರರ ತೋಳಿಂದ ಚಿಮ್ಮಿದ ಕತ್ತಿ, ತೀರಾ ಹರಿತವಾದ ಬಾಣ ಬಿಲ್ಲು ಗದೆ ಎಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಹೆಣದನಿ ಮೃಗಗಳನ್ನೆ ನೋಡು, ಇವರ ನಡುವೆ ಗುರುತಾಗಿ ಮಲಗಿರುವವು ಕೆಲವು. ಇವರ ಮೇಲೆ ಕುಣಿದು ಕುಪ್ಪಳಿಸುತ್ತಾ ಆಟ ಆಡುವವು ಕೆಲವು. ನೋಡತಾ ನೋಡತಾ ನನ್ನ ಕಿಚ್ಚಿನಲ್ಲಿ ನಾನೇ ಬೆಂದು ಹೋಗುತಿದೇನೆ ಪ್ರಭೂ.

ದ್ರೋಣ ದ್ರುಪದ ಶಲ್ಯ ಅಭಿಮನ್ಯು ಕೂಡ ಹುಲಿಗಳು ಅವರು ಈಗಲೂ ಬೆಂಕಿಯ ಹಾಗೆ ಉರಿಯುತ್ತಲೇ ಮಲಗಿದಾರೆ.

ಬಂಗಾರದ ಕವಚ, ತೋಳ ಬಂದಿ, ಸರ ಎಲ್ಲಾ ಹಾಕಿಕೊಂಡು ಸಿಂಗಾರಗೊಂಡವರ ಹಾಗೇ ಮಲಗಿದಾರೆ.

ಇದು ಪಾಂಚಾಲರ ಕುರುಗಳ ವಧೆ ಅಲ್ಲ. ಪಂಚಭೂತಗಳ ವಧೆ ಅಯ್ಯೋ. ಇಂಥವರನ್ನ ಹದ್ದು ಗರುಡ ಪಕ್ಷಿಗಳು ಕಾಲಿಂದ ಮೆಟ್ಟಿ ಸಿಗಿದು ತಿನ್ನುತ್ತಿವೆಯಲ್ಲಾ. ಜಯದ್ರಥ, ಕರ್ಣ, ದ್ರೋಣ, ಭೀಷ್ಮ, ಅಭಿಮನ್ಯು ಸಾಯುತ್ತಾರೆ ಅಂತ ಯಾರು ಅಂದುಕೊಂಡಿದ್ದರು? ಅವರನ್ನ ಕೊಲ್ಲುವವರೇ ಇಲ್ಲ ಅಂದುಕೊಂಡಿದ್ದೆ.

ಸತ್ತರು ಹುರುಳು ಕಳಕೊಂಡರು. ಹದ್ದು, ಕಾಗೆಗಳೂ ಹೆದರದ ಹಾಗಾದರು. ಕೋಪಕ್ಕೆ ಸಿಲುಕಿ ದುರ್ಯೋಧನನ ಕೈವಶವಾಗಿ ಈಗ ನೋಡು ಅಂಥ ಹುಲಿಗಳು ಆರಿಹೋದ ಬೆಂಕಿಯ ಹಾಗೆ ಬಿದ್ದಿದಾರಲ್ಲ.

ಹಿಂದೆ ಮಿದುವಾದ ಹಾಸಿಗೆ ಮೇಲೆ ಮಲಗುತ್ತಿದ್ದರು. ಈಗ ಈ ವಿಪತ್ತು ಬಂದು ನೆಲದ ಮೇಲೆ ಮಲಗಿದಾರೆ. ಎದ್ದಾಗ ಸ್ತುತಿ ಹೊಗಳಿಕೆ ಕೇಳಿ ಏಳುತ್ತಿದ್ದರು ಈಗ ನರಿತೋಳದ ಅಮಂಗಳದ ದನಿ ಕೇಳುತ್ತಾ ಮಲಗಿದಾರೆ. ಆಗ ಚಂದನ ಅಗರು ಹಚ್ಚಿಕೊಂಡು ಮಲಗಿದರು. ಈಗ ರಕ್ತದ ಕೆಸರಲ್ಲಿ ಮಲಗಿದಾರೆ. ಅವರ ಒಡವೆಗಳನ್ನ ನೋಡು ಹದ್ದು ಕಾಗೆಗಳು ಎಳೆದಾಡುತ್ತಿವೆ.

ಇನ್ನೂ ಯುದ್ಧ ನಿಂತಿಲ್ಲ ಎನ್ನುವ ಹಾಗೆ ಬಾಣ ಗದೆ, ಕತ್ತಿ ಹಿಡಕೊಂಡಿದಾರೆ. ಒಳ್ಳೆ ಹೋರಿಯ ಕಣ್ಣು. ಎಂಥ ಚಂದದ ರೂಪ. ಎಂಥ ಮೈಕಟ್ಟು. ಮೃಗದ ಕೈಯಲ್ಲಿ ಎಳೆದಾಡಿಸಿಕೊಳ್ಳುತಿದಾರೆ.

ಅದೋ ನನ್ನ ಸೊಸೆಯರನ್ನ ನೋಡು. ಅತ್ತು ಬಳಲಿ ಇನ್ನೂ ತಮ್ಮ ತಮ್ಮ ವೀರರನ್ನ ಹುಡುಕುತ್ತಲೇ ಇದಾರೆ. ಬಂಗಾರದ ಮೈಯ ನನ್ನ ಸೊಸೆಯರು, ಒಂದೇ ಬಟ್ಟೆ ಸುತ್ತಿಕೊಂಡು ಗುಂಪು ಕೂಡಿ ಅಳುತ್ತಾ ಅವರಷ್ಟಕ್ಕವರೇ ಓಡಾಡುತ್ತಿದ್ದಾರೆ. ಎಲ್ಲಾ ದನಿಗಳೂ ಕಲಕಿ ಕಲಸಿಕೊಂಡು ಇದು ಇಂಥವರದು ಎಂದು ಗೊತ್ತಾಗದ ಹಾಗೆ.

***

ಅಲ್ಲೇ

ಕೊಲೆಯಾಗಿ ಬಿದ್ದ ದುರ್ಯೋಧನನನ್ನು ಕಂಡೇಟಿಗೆ

ಗಾಂಧಾರಿ

ಕತ್ತೀಲಿ ಕತ್ತರಿಸಿದ ಬಾಳೆ ಹಾಗೆ ದೊಪ್ಪನೆ ಬಿದ್ದಳು

ಆ ರಕ್ತದ ಮೈಯನ್ನು ತಬ್ಬಿಕೊಂಡು ಅಯ್ಯೋ ಮಗನೇ ಅಯ್ಯೋ ಮಗನೆ ಅಂತ ಗೋಳಾಡಿದಳು.

ಹಾರ, ಬಂಗಾರದ ಸಿಂಗಾರವಾಗಿದ್ದ ಮಗನ ಅಗಲವಾದ ಎದೆ ಮೇಲೆ ಶೋಕದಿಂದ ಬಿಸಿಯಾದ ಕಣ್ಣೀರು ಸುರಿಸುತ್ತಾ

ಹತ್ತಿರ ಇದ್ದ ಕೃಷ್ಣನಿಗೆ–

ಆ ಯುದ್ಧ ಶುರುವಾಗೋವಾಗಲೇ ನನ್ನ ಈ ರಾಜರ ರಾಜ ಕೈ ಮುಗೀತಾ ಬಂದು

‘ಅಮ್ಮಾ, ದಾಯಾದಿಗಳ ಜತೆ ಯುದ್ಧಕ್ಕೆ ಹೊರಟಿದೀನಿ, ಜಯ ಹರಸು’ ಅಂದ.

ಮುಂದೆ ಒದಗೋ ಈ ಸಂಕಟ ಎಲ್ಲಾ ನನಗೆ ಗೊತ್ತಿತ್ತು ಕಾಣುತ್ತೆ.

‘ಧರ್ಮ ಇರೋ ಕಡೆ ಜಯ ಕಣಪ್ಪ, ಯುದ್ಧ ಮಾಡಿಯೇ ತೀರತೀನಿ ಅಂತಿದೀಯ, ವೀರಲೋಕ ಪಡಿ ನನ ಕಂದ’ ಅಂದುಬಿಟ್ಟೆ.

ಇವನ ವಿಷಯಕ್ಕೆ ನನಗೇನೂ ದುಃಖ ಇಲ್ಲ. ಆದರೆ ನಂಟರನ್ನೆಲ್ಲ ಕಳಕೊಂಡು ತಬ್ಬಲಿ ಆಗಿಬಿಟ್ಟನಲ್ಲ ಆ ಧೃತರಾಷ್ಟ್ರ, ಅವನಿಗೋಸ್ಕರ ಸಂಕಟ ಪಡತಿದೀನಿ.

ಈ ನನ ಕಂದ ಎಂಥ ಬಿಲ್ಲುಗಾರ. ಇವನಂಥ